ಸೂರ್ಯ ಮನೆಯಲ್ಲಿದ್ದರೂ, ಎಲೆಯ ಮೇಲಿನ ನೀರಿನ ಹನಿಯಂತೆ ಅಂಟಿಯೂ ಅಂಟದವನಂತಿದ್ದ. ವಿಜಯಮ್ಮನ ಬಳಿಯೂ ಅಂತರ ಕಾಪಾಡಿಕೊಂಡಿದ್ದ. ಅವನ ಗಂಭೀರವದನ ಕಂಡು ವಿಜಯಮ್ಮ ಯಾವ ಮಾತನ್ನೂ ಆಡದೇ ತಮ್ಮ ಪಾಡಿಗೆ ತಾವಿದ್ದು ಬಿಟ್ಟರು. ಮಾತು ಆಡಲು ಬಾಯ್ತೆರೆದರೆ ಉದ್ಭವಿಸುವ ಬಿಕ್ಕಟ್ಟಿಗಿಂತಲೂ ಮೌನ ಧರಿಸಿ, ನೆಮ್ಮದಿ ಕಾಪಾಡುವುದು ವಾಸಿ ಎನಿಸಿತ್ತು. ಜೊತೆಗೆ ಮನೆ ತೊರೆದು ಹೋಗದೇ ಮನೆಯೊಳಗೆ ಉಳಿದಿದ್ದಾನೆ ಎನ್ನುವ ಸಮಾಧಾನವೂ ಇತ್ತು.

ಅಪೂರ್ವಳಿಗೆ ಪರೀಕ್ಷೆ ಶುರುವಾಗುವುದರಲ್ಲಿತ್ತಾದ್ದರಿಂದ ರಾಯರು ಅವಳ ಓದಿಗೆ ಭಂಗ ತರದಂತೆ ವಿಜಯಮ್ಮನಿಗೆ ಕಟ್ಟಪ್ಪಣೆ ಹೊರಡಿಸಿದ್ದರು. ಅಪೂರ್ವ ಕೋಣೆಯ ಬಾಗಿಲು ಮುಚ್ಚಿ ಗಂಭೀರವಾಗಿ ಹಗಲು ರಾತ್ರಿ ಓದಿ ತಯಾರಿ ನಡೆಸಿದಳು. ಸೂರ್ಯ ಅವಳನ್ನು ಕಾಡಲು ಪರಿತಪಿಸುತ್ತಿದ್ದನಾದರೂ ಅವಳ ದರ್ಶನ ಮಾತ್ರ ಸಾಧ್ಯವಾಗುತ್ತಿರಲಿಲ್ಲ. ಅವನು ಅವಳನ್ನು ಕಾಣದೇ ಚಡಪಡಿಸುತ್ತಿದ್ದ. ಬೆಳಿಗ್ಗೆ ರಾಯರೇ ಅಪೂರ್ವಳನ್ನು ಕಾಲೇಜಿಗೆ ಬಿಟ್ಟು ಹಾಗೇ ತಮ್ಮ ಕಾರ್ಯನಿಮಿತ್ತ ಹೋಗುತ್ತಿದ್ದರು. ಮಧ್ಯಾಹ್ನ ಪರೀಕ್ಷೆ ಮುಗಿಯುತ್ತಲೂ ಕರೆ ತರುತ್ತಿದ್ದರು. ಮತ್ತೆ ಅಪೂರ್ವ ತಾನಾಯಿತು ತನ್ನ ಕೋಣೆಯಾಯಿತು ಎನ್ನುವಂತೆ ಇದ್ದಳು. ವಿಜಯಮ್ಮನಿಗೂ ಈಗ ಅವಳ ಬಗ್ಗೆ ಅಕ್ಕರಾಸ್ಥೆ ಮೂಡಿತ್ತಾದ್ದರಿಂದ, ಅವಳ ಏಕಾಗ್ರತೆಗೆ ಭಂಗ ತಾರದೇ ಅವಳನ್ನು ಅವಳ ಪಾಡಿಗೆ ಬಿಟ್ಟು ಬಿಟ್ಟರು. ಆದರ್ಶ, 'ಆಲ್ ದ ಬೆಸ್ಟ್ ಫಾರ್ ಎಕ್ಸಾಮ್' ಎಂದು ಸಂದೇಶ ಕಳಿಸಿದ್ದ. ಒಂದು ತಿಂಗಳ ಅವಧಿಯಲ್ಲಿ ಅಪೂರ್ವ ಪರೀಕ್ಷೆಗಳನ್ನು ಬರೆದು ನಿರಾಳಳಾದಳು. ಊರಿನಿಂದ ವಸುಮತಿ ಅದಕ್ಕೇ ಕಾದವರಂತೆ ಫೋನ್ ಮಾಡಿದ್ದರು. 'ಹೇಗಿದ್ರೂ ಪರೀಕ್ಷೆ ಮುಗಿದಿದೆ ಅಪೂರ್ವ... ಊರಿಗೆ ನಮ್ಮ ಜೊತೆ ಇರಲು ಯಾವಾಗ ಬರ್ತಿದ್ದೀಯಾ.?'

ವಾಸ್ತವವಾಗಿ ಅವಳಿಗೆ ಹಳ್ಳಿಗೆ ಹೋಗಲು ಮನಸ್ಸಿರಲಿಲ್ಲ. ಹಾಗೆಂದು ಅವಳಿಗೆ ನೇರವಾಗಿ ನಿರಾಕರಿಸುವ ಧೈರ್ಯವೂ ಅವಳಿಗಿರಲಿಲ್ಲ. ಚಿಕ್ಕಮ್ಮನ ಮನಸ್ಸನ್ನು ನೋಯಿಸುವ ಕೆಲಸ ಅವಳೆಂದೂ ಮಾಡಳು. ವಸುಮತಿ ಚಿಕ್ಕಮ್ಮ ತನಗೆ ಒತ್ತಾಸೆಯಾಗಿ ನಿಲ್ಲದಿದ್ದರೆ, ತಮ್ಮ ಗತಿ ಏನಾಗುತ್ತಿತ್ತೋ? ಸದಾ ಊರಿಗೆ ಹೋಗಲು ಹಾತೊರೆಯುತ್ತಿದ್ದ ತನ್ನ ಮನಸ್ಸಿಗೆ ಈಗ ತಡೆಯೊಡ್ಡಿದ ಶಕ್ತಿ ಯಾವುದು? ಸೂರ್ಯನೇ? ಅವನನ್ನು ಈ ಸ್ಥಿತಿಯಲ್ಲಿ ಬಿಟ್ಟು ಹೋಗಲು ತನ್ನ ಮನಸ್ಸು ಬರುತ್ತಿಲ್ಲ.

'ಚಿಕ್ಕಮ್ಮ ಈಗಷ್ಟೇ ಪರೀಕ್ಷೆ ಮುಗಿದಿದೆ...ಹಾಗೇ ಅಲ್ಲಿಗೆ ಬರಲು ಸರಿ ಹೋಗಲ್ಲ.. ಸ್ವಲ್ಪ ದಿನ ಬಿಟ್ಟು ಬರ್ತೀನಿ'.

'ಆಯ್ತಮ್ಮಾ ಈ ಸಲ ರಜೆಗೆ ಇಲ್ಲಿಗೆ ಬಂದಿರಲು ಅವಕಾಶ ಇರುತ್ತೆ.. ಮುಂದಿನ ವರ್ಷ ಕಾಲೇಜು ಜೀವನ ಮುಗಿದು ನೌಕರಿ ಹಿಡಿದಿರ್ತೀಯಾ? ಆಮೇಲೆ ಇಲ್ಲಿ ಬರಲು ಆಗಲ್ವಲ್ಲಾ.. ಅದಿಕ್ಕೆ ಹೇಳಿದೆ' ವಸುಮತಿ ನುಡಿದರು.

'ಆಯ್ತು ಚಿಕ್ಕಮ್ಮಾ..ಬರುವಾಗ ಫೋನ್ ಮಾಡಿ ಬರ್ತೀನಿ.' ಎಂದು ಹೋಗುವ ಯೋಜನೆಯನ್ನು ಮುಂದೂಡಿದಳು. ಅಪೂರ್ವ ಎಂದಿನಂತೆ ಓಡಾಡಿಕೊಂಡಿರುವುದು ಕಂಡು ಸೂರ್ಯ ಪ್ರಸನ್ನನಾದ.

ಅವನು ಪ್ರಭಾಕರರಾಯರನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರುವುದು ಅಪೂರ್ವಳಿಗೆ ನುಂಗಲಾರದ ತುತ್ತಿನಂತಾಗಿತ್ತು. ಅವರೆಷ್ಟೋ ಸಲ ಅವನನ್ನು ಮಾತಿಗೆಳೆಯುವ ಯತ್ನ ನಡೆಸಿದರೂ ಸೂರ್ಯ ಆಲಿಸದವನಂತೆ ವರ್ತಿಸುತ್ತಿದ್ದ. ರಾಯರು ತಾವೇನೋ ಗಹನವಾದ ತಪ್ಪು ಮಾಡಿರುವಂತೆ, ಪಾಪಪ್ರಜ್ಞೆಯಿಂದ ನರಳುವಂತಾಗಿತ್ತು. ವಿಜಯಮ್ಮ ಕೂಡಾ ಅಂದು ರಾಯರ ಪರ ವಹಿಸಿ ಮಾತನಾಡಿದ ಬಳಿಕ ತಾಯಿಯ ಬಳಿಯೂ ಮಾತು ಎಷ್ಟು ಬೇಕೋ ಅಷ್ಟೇ ಎನ್ನುವಂತಿತ್ತು. ಇದನ್ನೆಲ್ಲಾ ಕಂಡ ಅಪೂರ್ವಳಿಗೆ ಅವನನ್ನು ಸರಿದಾರಿಗೆ ಹೇಗೆ ತರುವುದೆಂದೇ ತೋಚದೆ ತಲೆಗೆ ಕೈ ಹೊತ್ತು ಕುಳಿತಳು. ಅವನು ಒಂಟಿಯಾಗಿದ್ದಾಗ ಅಪೂರ್ವ ಅವನಿಗೆ ಬುದ್ಧಿ ಹೇಳುವ ಯತ್ನ ಮಾಡಿದಳು.

'ಸೂರ್ಯ ನೀವು ಹೆತ್ತವರೊಡನೆ ವರ್ತಿಸುವ ರೀತಿ ಸರಿ ಇಲ್ಲ'

'ನನ್ಗೆ ಅವ್ರ ಮುಖ ಕಂಡ್ರೆ ಹಳೇದೆಲ್ಲ ನೆನಪಾಗುತ್ತೆ... ನಾನೇನು ಮಾಡಲಿ... ನನ್ನ ಮನಸ್ಸು ಕುದಿಯುತ್ತೆ..'

'ಅವ್ರು ಮಾಡಿರುವ ಅಪಕಾರದ ಮಾತನಾಡ್ತೀರ.. ಹಾಗೇ ಮಾಡಿರುವ ಉಪಕಾರಗಳನ್ನು ಯಾಕೆ ನಿಮ್ಮ ಮನಸ್ಸು ಸ್ಮರಿಸಲ್ಲ...ಅದೆಲ್ಲ ಮರೆಯಲು ಸಾಧ್ಯನಾ? ನಿಮ್ತಾಯೀನ, ನಿಮ್ಮನ್ನ ರಾಯರು ಕೈ ಹಿಡಿದು ಕಾಪಾಡದೇ ಹೋಗಿದ್ರೆ ನಿಮ್ಮ ಪರಿಸ್ಥಿತಿ ಏನಾಗ್ತಿತ್ತು? ಅದಕ್ಕಾದರೂ ಕೃತಜ್ಞತೆ ಬೇಡ್ವಾ?'

'ಆಗ ಕಾಪಾಡದೇ ಇದ್ದಿದ್ರೇನೇ ಚೆನ್ನಾಗಿತ್ತು.. ಕನಿಷ್ಠ ನಾನು ಜೈಲಿಗೆ ಹೋಗುವ ಪ್ರಸಂಗನೇ ಬರ್ತಾ ಇರಲಿಲ್ಲ.' ಸೂರ್ಯ ಕಹಿಯಾಗಿ ನುಡಿದ.

'ನೀವು ಮಾಡಿರುವ ತಪ್ಪಿಗೆ ಅವ್ರನ್ನ ಯಾಕೆ ಹೊಣೆ ಮಾಡ್ತೀರ?.. ನಿಮ್ಗೆ ಯಾರನ್ನಾದ್ರೂ ಕೊಲೆ ಮಾಡು ಅಂತ ರಾಯರು ಹೇಳಿದ್ದಾರ..? ನೀವು ಮಾಡಿರುವ ತಪ್ಪಿಗೆ ನೀವೇ ಹೊಣೆಗಾರರೇ ಹೊರತು ಅವರಲ್ಲ..ಸೂರ್ಯ ಅರ್ಥ ಮಾಡಿಕೊಳ್ಳಿ..ಅವ್ರಿಗೆ ವಯಸ್ಸಾಗಿದೆ..ಇತ್ತೀಚೆಗಷ್ಟೇ ಹೃದಯ ಬೇನೆಯಿಂದ ಚೇತರಿಸಿಕೊಂಡಿದ್ದಾರೆ.. ಅವ್ರಿಗೆ ಇನ್ನಷ್ಟು ನೋವು ಕೊಡಬೇಡಿ...'

ಅಪೂರ್ವಳ ಮಾತುಗಳನ್ನು ಅಲಕ್ಷಿಸಿ ಅವನು ಕೋಣೆಯಿಂದ ಹೊರ ನಡೆದಿದ್ದ. ತನ್ನ ಬುದ್ಧಿವಾದ ಅವನ ಮೇಲೆ ಯಾವ ಪರಿಣಾಮವೂ ಬೀರಲಿಲ್ಲವೆಂದು ಅಪೂರ್ವ ಖೇದಗೊಂಡಳು.

**ಅಧ್ಯಾಯ 20**

ಆದರ್ಶನ ಫೋನ್ ಕರೆಯನ್ನು ಸ್ವೀಕರಿಸಿ ಮಾತನಾಡುತ್ತ 'ಹಲೋ' ಎಂದಳು ಅಪೂರ್ವ.

'ಊರಲ್ಲಿದ್ದೀರಾ? ಪರೀಕ್ಷೆಯೆಲ್ಲಾ ಹೇಗಾಯ್ತು?'ಎಂದು ವಿಚಾರಿಸಿಕೊಂಡ.

'ಊರಿಗೆ ಹೋಗಿಲ್ಲ.. ಬೆಂಗಳೂರಿನಲ್ಲೇ ಇದ್ದೀನಿ.' ಎಂದಾಗ ಅವನು ಉದ್ವೇಗದಿಂದ,

'ಹೌದಾ...ಹಾಗಾದ್ರೆ ಸಿಗ್ತೀರಾ...ಮಾತನಾಡಲು?' ಅವನ ಆಹ್ವಾನವನ್ನು ನಿರಾಕರಿಸಲಾಗದೇ ಒಪ್ಪಿದಳು. ಸಂಜೆ ನಾಲ್ಕು ಗಂಟೆಗೆ ಅವನು ಹೇಳಿದ ಸ್ಥಳಕ್ಕೆ ಬಂದು ತಲುಪಿದಾಗ ಅವನು ಆಗಲೇ ಆಗಮಿಸಿದ್ದ. ಹತ್ತಿರದಲ್ಲಿದ್ದ ರೆಸ್ಟೋರೆಂಟನ್ನು ಹೊಕ್ಕು ಕಾಫಿ ಕುಡಿಯುತ್ತ, 'ಊರಿಗೆ ಹೋಗ್ತೀನಿ ಅಂದಿದ್ರಿ?'

'ಹೋಗ್ಲಿಕ್ಕಾಗಿಲ್ಲ...ಮನೇಲಿ ರಾದ್ಧಾಂತ ನಡೀತಿದೆ ನಿಮ್ಗೆ ಗೊತ್ತೇ ಇದ್ಯಲ್ವಾ...?' ಎಂದಾಗ ಅವನು ಅರ್ಥವಾಗದವನಂತೆ ಅವಳ ಮುಖ ದಿಟ್ಟಿಸಿದ. ಅವಳೇ ಮಾತು ಮುಂದುವರೆಸುತ್ತ,'ಸೂರ್ಯನ ಬಗ್ಗೆ ನಿಮ್ಮ ಅತ್ತೆ, ಮಾವ ಇಬ್ರೂ ತುಂಬಾ ಬೇಸರಿಸಿಕೊಂಡಿದ್ದಾರೆ... ಸೂರ್ಯನಿಗೆ ಎಷ್ಟು ಹೇಳಿದ್ರೂ ಅರ್ಥವಾಗ್ತಾ ಇಲ್ಲ...ಅದೇ ಹಳೇ ಸೂರ್ಯನ ಥರ ಬಿಹೇವ್ ಮಾಡ್ತಿದ್ದಾರೆ...ಮತ್ತೆ ಡಾ.ಮುರಳಿ ಹತ್ರ ಕೌನ್ಸಿಲಿಂಗ್‌ಗೆ ಕರ್ಕೊಂಡು ಹೋಗ್ಬೇಕೇನೋ...ಆದ್ರೆ ...ಅವ್ರ ಮನದಲ್ಲಿರುವ ಕಹಿ ಅಳಿಸೋದು ಹೇಗೆ ಅಂತ ಅರ್ಥವಾಗ್ತಿಲ್ಲ...!' ಅಪೂರ್ವ ತೀರಾ ಯೋಚನಾ ಮಗ್ನಳಾಗಿ ನುಡಿದಾಗ, ಅವಳು ಸೂರ್ಯನ ಬಗ್ಗೆ ಅಷ್ಟೊಂದು ಚಿಂತಿತಳಾಗಿರುವುದನ್ನು ಕಂಡು ಆದರ್ಶನಿಗೆ ಅಸೂಯೆ ಮೂಡಿತು.

'ಕೆಲವು ವಿಷಯಗಳು ಹಾಗೇ ಅಪೂರ್ವ... ಮನಸಲ್ಲಿ ಮೂಡಿದ ಭಾವನೆ ಆಳವಾಗಿ ಬೇರೂರಿದರೆ ಕಿತ್ತೊಗೆಯುವುದು ಕಷ್ಟ. ಅದಕ್ಕಾಗುವ ಗಾಯ, ಅದರ ನೋವು ಹೊರಗಿನವರಿಗೆ ಕಾಣಿಸೋದಿಲ್ಲ...' ಅವಳನ್ನೇ ದೀರ್ಘವಾಗಿ ನೋಡುತ್ತ ನುಡಿದ. ಅವನ ಮಾತಿನ ಹಿಂದಿನ ಅರ್ಥವನ್ನು ಅಪೂರ್ವ ಸೂರ್ಯನ ಬಗೆಗೆ ಪರಿಗಣಿಸುತ್ತ, 'ಆದ್ರೆ...ಅಂಕಲ್ ಹಾಗೆ ಅಂತ ಸೂರ್ಯ ಅಪಾರ್ಥ ಮಾಡಿಕೊಂಡಿದ್ದಾರೆ.. ಹೃದಯದೊಳಗಿನ ಪ್ರೀತಿ, ಮಮತೆಯನ್ನು ಹರಿದು ತೋರಿಸಲು ಸಾಧ್ಯನಾ? ಅಂಕಲ್ ತಮ್ಮನ್ನು ತಾವು ಹೇಗೆ ಸಮರ್ಥಿಸಿಕೊಳ್ಳಲು ಸಾಧ್ಯ.. ನೀವೇ ಹೇಳಿ?'

'ಹಾಗೆ ತೋರಿಸಲು ಸಾಧ್ಯವಾಗಿದ್ದರೆ ಚೆನ್ನಾಗಿತ್ತು...ನನ್ನ ಪ್ರೀತಿನೂ ನಿಮ್ಗೆ ಹಾಗೆ ಹೃದಯ ಬಿಚ್ಚಿ ತೋರಿಸಬಹುದಿತ್ತು..' ಆದರ್ಶ ತಟ್ಟನೇ ನುಡಿದಾಗ ಅಪೂರ್ವ ಅವಕ್ಕಾಗಿ ಅವನ ಮುಖವನ್ನೇ ದಿಟ್ಟಿಸಿದಳು. ಅವನ ಮನಸಲ್ಲಿ ನಡೆಯುತ್ತಿದ್ದದ್ದೇನೆಂದು ಆಗ ಅಪೂರ್ವಳಿಗೆ ಮನದಟ್ಟಾಗಿ ಅವಳ ಮುಖದ ಭಾವನೆ ಬದಲಾಯಿತು.

'ಆದರ್ಶ.. ಪ್ಲೀಸ್ ನಾನು ನಿಮ್ಗೆ ಸ್ಪಷ್ಟವಾಗಿ ಹೇಳಿದ್ದೀನಿ.. ಮತ್ತೆ ಮತ್ತೆ ಅದನ್ನೇ ಮಾತನಾಡಿದರೆ ನಮ್ಮ ಸ್ನೇಹಕ್ಕೆ ಅಡ್ಡಿಯಾಗುತ್ತೆ.. ನನಗೆ ಕಷ್ಟವಾಗುತ್ತೆ.. ನೀವು ಇಷ್ಟು ದೊಡ್ಡ ಹುದ್ದೆಯಲ್ಲಿದ್ದೀರಾ...ಇಷ್ಟು ಒಳ್ಳೇ ಕುಟುಂಬದಿಂದ ಬಂದಿದ್ದೀರ...ನಿಮ್ಗೆ ನನಗಿಂತಲೂ ಎಲ್ಲಾ ರೀತೀಲಿ ಯೋಗ್ಯ ಹುಡ್ಗಿ ಸಿಗ್ತಾಳೆ... ನಾನು ನಿಮ್ಗೆ ಯಾವ ರೀತಿಯೂ ಸಮವಲ್ಲ...ಭಾವುಕತೆಗೆ ಒಳಗಾಗಿ ಇಂಥ ತೀರ್ಮಾನ ತಗೋಬೇಡಿ..'

'ಅಪೂರ್ವ..ನಾನು ತುಂಬಾ ಹುಡ್ಗೀರನ್ನ ನೋಡಿದ್ದೀನಿ...ಸ್ನೇಹ ಸಂಪಾದಿಸಿದ್ದೀನಿ..ಆದ್ರೆ ನಿಮ್ಮಷ್ಟು ಯಾರೂ ಹೃದಯಕ್ಕೆ ಆಪ್ತರಾಗಿಲ್ಲ... ನಿಮ್ಮನ್ನು ಕಂಡಾಗ ಉಂಟಾದ ಭಾವನೆ ಬೇರೆ ಯಾರ ಬಗ್ಗೆನೂ ಮೂಡಿಲ್ಲ. ನಿಮ್ಮ ಸ್ವಭಾವ, ವ್ಯಕ್ತಿತ್ವ, ಬೇರೆ ಯಾರಲ್ಲೂ ಇಲ್ಲ. ನೀವು ನನ್ನ ಜೀವನದಲ್ಲಿ